## ಎಲ್ಲಿಯದೀ ‘ಟ್ರೋಲ್’ ಪದ?

‘ಟ್ರೋಲ್’ ಗ್ರಾಮ್ಯ ಸೊಗಡಿನ ಪದ. ಓಲ್ಡ್ ನಾರ್ಸ್ ಅಥವಾ ಓಲ್ಡ್ ಸ್ಕ್ಯಾಂಡಿನೇವಿಯನ್ ಎಂಬ ಕಾಲಘಟ್ಟವಿತ್ತು. ಕ್ರಿ.ಶ. 1610ರ ಅವಧಿ ಇದು. ಉತ್ತರ ಜರ್ಮನಿಕ್ ದೇಸಿ ಪದಗಳು ಹುಟ್ಟಿದ ಕಾಲಘಟ್ಟವನ್ನು ಓಲ್ಡ್ ನಾರ್ಸ್ ಎನ್ನುತ್ತಾರೆ. ಆಗ ‘ಟ್ರೋಲ್’ ಎನ್ನುವ ಪದ ಬಳಕೆಗೆ ಬಂತು ಎಂದು ಇತಿಹಾಸಕಾರರು ಹೇಳುತ್ತಾರೆ. ರಾಕ್ಷಸ ಅಥವಾ ದುಷ್ಟಶಕ್ತಿಗೆ ಆ ಕಾಲದಲ್ಲಿ ‘ಟ್ರೋಲ್’ ಎಂದು ಸ್ಥಳೀಯರು ಕರೆಯುತ್ತಿದ್ದರು. ಪಿತೂರಿ ಮಾಡುವ, ಜಂಗಳಗಂಟ ಪಾತ್ರಗಳನ್ನು ಸ್ಕ್ಯಾಂಡಿನೇವಿಯನ್ ಜನಪದ ಕಥೆಗಳಲ್ಲಿ ‘ಟ್ರೋಲ್’ ಎಂದು ಉಲ್ಲೇಖಿಸಿದ್ದೂ ಉಂಟು. ನಾಮಪದ, ಕ್ರಿಯಾಪದ ಎರಡೂ ಬಗೆಯಲ್ಲಿ ‘ಟ್ರೋಲ್’ ಬಳಕೆಯಲ್ಲಿದೆ. ಆನ್‌ಲೈನ್‌ನಲ್ಲಿ ಕಿಡಿ ಹೊತ್ತಿಸುವ, ಅಪ್ರಾಮಾಣಿಕವಾದ, ವಿಷಯಕ್ಕೆ ಹೊರತಾಗಿ ಕಾರಿಕೊಳ್ಳುವ ಸಂದೇಶಗಳನ್ನು ಹಾಕುವಂಥವರು ‘ಟ್ರೋಲರ್’ಗಳೆಂದು ಕರೆಸಿಕೊಂಡರು. ಮುಖವಿಲ್ಲದ ನಿರ್ದಿಷ್ಟ ವ್ಯಕ್ತಿ ಅಥವಾ ಕುಟುಂಬಗಳ ನೆಮ್ಮದಿ ಹಾಳು ಮಾಡುವಂಥ ವ್ಯಕ್ತಿಯನ್ನು ‘ಟ್ರೋಲರ್’ ಎಂದು ‘ದಿ ಕೊರಿಯರ್ ಮೇಲ್’ ಹಾಗೂ ‘ದಿ ಟುಡೆ ಶೋ’ ಸಂಬೋಧಿಸಿದವು. ಎಚ್‌ಬಿಒ ಟೀವಿ ಶೋ ‘ದಿ ನ್ಯೂಸ್‌ರೂಮ್’ನಲ್ಲಿನ ಕೇಂದ್ರ ಪಾತ್ರವು ತನ್ನ ಮೇಲಿನ ಸಾಕ್ಷ್ಯಾಧಾರವಿಲ್ಲದ ಆರೋಪಗಳನ್ನು ಸತತವಾಗಿ ಎದುರಿಸುವಂತಹ ಚಿತ್ರಣವಿದೆ. ಆ ಪಾತ್ರ ಟ್ರೋಲ್‌ಗಳನ್ನು ಮುಖಾಮುಖಿಯಾಗುತ್ತದೆ ಎಂದು ಈ ಕಾರ್ಯಕ್ರಮದ ಬರಹಗಾರರೂ ಉಲ್ಲೇಖಿಸಿದ್ದರು.

ಇನ್ನೊಂದು ಮದುವೆಯಾಗಿರುವೆ. ಅದು ನನ್ನ ಆಯ್ಕೆ. ನನಗೆ ಬೆಳೆದ ಮಗ ಇದ್ದು, ಅವನು ತನ್ನ ಪಾಡಿಗೆ ತಾನು ಕೆಲಸದಲ್ಲಿ ಇದ್ದಾನೆ. ಇದು ನಮ್ಮ ಬದುಕು. ಯಾರು ಯಾರೋ ಬಂದು ಟ್ರೋಲ್ ಮಾಡಲು ಇದು ಅವರ ಬದುಕಲ್ಲ.’’

ನಟಿ ಸೋನಾಕ್ಷಿ ಸಿನ್ಹ 2020ರಲ್ಲಿ, ‘ನಿಮ್ಮ ಆರೋಗ್ಯ ಚೆನ್ನಾಗಿ ಇರಬೇಕಾದರೆ ಸಾಮಾಜಿಕ ಜಾಲತಾಣಗಳಿಂದ ದೂರವಿರಿ’ ಎಂದು ಹೇಳಿದ್ದರು. ಅದೇ ಹಾದಿಯಲ್ಲಿ ಅಮೀರ್ ಖಾನ್, ಕರಣ್ ಜೋಹರ್ ಕೂಡ ನಡೆದಿದ್ದನ್ನು ನೆನಪಿಸಿಕೊಳ್ಳಬಹುದು.

ಇಂಡಿಯನ್ ಐಡಲ್‌ನಲ್ಲಿ ಸ್ಪರ್ಧಿಸಿ ಮೂರನೇ ಸ್ಥಾನ ಪಡೆದ ಗಾಯಕ ರಾಹುಲ್ ವೈದ್ಯ ಅವರನ್ನು ಟ್ರೋಲರ್ ಒಬ್ಬ, ‘ಅಪ್ರಯೋಜಕ. ಕವಡೆ ಕಾಸಿನ ಕಿಮ್ಮತ್ತೂ ಇಲ್ಲದವ, ನಾಚಿಕೆಗೇಡಿನ ವ್ಯಕ್ತಿ. ನೀನು ಮದುವೆಯಲ್ಲಿ ಹಾಡಬೇಕಷ್ಟೆ’ ಎಂದು ಟ್ರೋಲ್ ಮಾಡಿದ್ದ. ಇದಕ್ಕೆ ರಾಹುಲ್ ಪ್ರತಿಕ್ರಿಯಿಸಿ, ‘ನಿನಗೆ ಮದುವೆ ಆಗಿದೆಯಾ? ಫಿಕ್ಸ್ ಆದರೆ ತಿಳಿಸು. ಅಲ್ಲಿಗೂ ಬಂದು ಹಾಡುವೆ. ಇಷ್ಟಕ್ಕೂ ನನ್ನ ಸಂಭಾವನೆ ಹೊಂದಿಸಲು ನಿನಗೆ ಆಗದೇ ಇರಬಹುದು. ನಾನು ಅಷ್ಟು ದುಬಾರಿ. ಮುಂದಿನ ಜನ್ಮದಲ್ಲಾದರೆ ನೋಡೋಣ’ ಎಂದು ವ್ಯಂಗ್ಯವಾಗಿಯೇ ಪ್ರತಿಕ್ರಿಯೆ ಬರೆದಿದ್ದರು.

ಐಶ್ವರ್ಯಾ ರೈ ಏರ್‌ಪೋರ್ಟ್‌ನಲ್ಲಿ ತಮ್ಮ ಮಗಳ ಕೈ ಹಿಡಿದು ನಡೆದುಕೊಂಡು ಸಾಗಿದ್ದನ್ನೂ ಎಷ್ಟೋ ಜನರು ಟ್ರೋಲ್ ಮಾಡಿದ್ದರು. ದೇಹ ದಪ್ಪಗಾದದ್ದನ್ನು ಕೆಟ್ಟದಾಗಿ ಟ್ರೋಲ್ ಮಾಡಿದಾಗ, ನಟಿ ಸ್ವರಾ ಭಾಸ್ಕರ್ ಅನೇಕ ಟ್ರೋಲಿಗರಿಗೆ ಪ್ರತಿಕ್ರಿಯೆಗಳನ್ನೂ ನೀಡಿ ದಂಗುಬಡಿಸಿದ್ದರು. ‘ಬಾಡಿ ಶೇಮಿಂಗ್’ ಮಾಡುವುದು ಸರಿಯಲ್ಲ ಎಂಬರ್ಥದಲ್ಲಿ ಸ್ವರಾ ಅವರ ಮಾತಿಗೆ ಬೆಂಬಲ ಸೂಚಿಸಿದವರ ಸಂಖ್ಯೆಯೂ ಆಗ ದೊಡ್ಡದಿತ್ತು.

### ಟ್ರೋಲಿಲ್ಲದ ದೇಶವಿಲ್ಲ!

ವಿಶ್ವದಲ್ಲಿ ಇದುವರೆಗೆ ಅತಿ ಹೆಚ್ಚು ಟ್ರೋಲ್‌ಗೆ ಒಳಗಾದ ಸೆಲೆಬ್ರಿಟಿಗಳು ಯಾರು ಯಾರು ಎಂದು ಅನೇಕ ಜಾಲತಾಣ ಸಂಶೋಧಕರು ವಿಶ್ಲೇಷಿಸಿದ್ದಾರೆ. ಬ್ರಿಟನ್‌ನ ಪಾಶ್ಚಾತ್ಯ ಗಾಯಕಿ ಅಡೆಲ್ ಆ ಯಾದಿಯಲ್ಲಿ ಎಷ್ಟೋ ವರ್ಷಗಳ ಕಾಲ ಮೊದಲ ಸ್ಥಾನದಲ್ಲಿದ್ದರು. 2021ರಲ್ಲಿ ಟ್ವಿಟರ್‌ನಲ್ಲಿ ಅತಿ ಹೆಚ್ಚು ಟ್ರೋಲ್‌ಗೆ ಒಳಗಾದ ಸೆಲೆಬ್ರಿಟಿಗಳಲ್ಲಿ ಮೊದಲಿಗರು ಇಂಗ್ಲಿಷ್ ಬ್ರಾಡ್‌ಕಾಸ್ಟರ್ ಪತ್ರಕರ್ತ ಪಿಯರ್ಸ್ ಮಾರ್ಗನ್. 2021ರಲ್ಲಿ ಐಟಿವಿಯಲ್ಲಿ ‘ಗುಡ್‌ಮಾರ್ನಿಂಗ್ ಬ್ರಿಟನ್’ ಎಂಬ ಶೋ. ಅದನ್ನು ನಡೆಸಿಕೊಡುತ್ತಿದ್ದುದು ಪಿಯರ್ಸ್. ರಾಜಮನೆತನದಿಂದ ಹೊರಗುಳಿದು ಸುದ್ದಿ ಮಾಡಿದ್ದ ಮೆಘಾನ್ ಮಾರ್ಕಲ್ ಅವರನ್ನು ಆ ಶೋ ಪ್ರಾರಂಭವಾಗುವ ಮೊದಲು ಓಪ್ರಾ ವಿನ್‌ಫ್ರೇ ಸಂದರ್ಶನ ಮಾಡಿದ್ದರು. ಪಿಯರ್ಸ್ ತಮ್ಮ ಶೋನಲ್ಲಿ ಮೆಘಾನ್ ಹೇಳಿದ ಒಂದೂ ಪದವನ್ನು ತಾವು ಒಪ್ಪಲ್ಲ ಎಂದು ಹೇಳಿಬಿಟ್ಟರು. 41 ಸಾವಿರ ದೂರುಗಳು ಅವರ ಈ ವರ್ತನೆ ಖಂಡಿಸಿ ಟಿ.ವಿ. ವಾಹಿನಿಗೆ ಹರಿದುಬಂದಿದ್ದವು. ಸಾಮಾಜಿಕ ಜಾಲತಾಣದಲ್ಲಂತೂ ಅವರನ್ನು ಟೀಕಿಸಿ ಟ್ರೋಲ್ ಮಾಡಿದವರ ಸಂಖ್ಯೆ ದೊಡ್ಡದಿದೆ. ಟ್ವಿಟರ್ ಖಾತೆಯಲ್ಲಿ ಆ ಕಾಲಘಟ್ಟದಲ್ಲಿ ಪಿಯರ್ಸ್ ಫಾಲೋವರ್ಸ್ ಸಂಖ್ಯೆ ಸುಮಾರು 80 ಲಕ್ಷದಷ್ಟಿತ್ತು. ಅವರಲ್ಲಿ ಶೇ. 52ರಷ್ಟು ಜನ ಸದಾ ಕಾಲ ಅವರನ್ನು ಟ್ರೋಲ್ ಮಾಡಿದವರೇ. ಟ್ವಿಟರ್‌ನಲ್ಲಿ 2021ರಲ್ಲಿ ಅತಿ ಹೆಚ್ಚು ಟ್ರೋಲ್‌ಗೆ ಒಳಗಾದವರ ಪಟ್ಟಿಯಲ್ಲಿ ಎರಡನೇ ಹೆಸರು ಟಿಮ್ ಕುಕ್. ಆ್ಯಪಲ್ ಕಂಪನಿಯ ಸಿಇಒ ಈ ಟಿಮ್ ಕುಕ್. ಗೂಗಲ್ ಅವರನ್ನು ತನ್ನ ತಾಂತ್ರಿಕ ಟೂಲ್‌ಗಳನ್ನು ಬಳಸಿ ಟ್ರೋಲ್

